ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲಗಳ ಸಚಿವರು):–

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) 2011–12ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2701–ಗೋಂದಿ ಅಣೆಕಟ್ಟು ಯೋಜನೆ (ಎಂ & ಎಂ.ಐ.) ಅಡಿಯಲ್ಲಿ ಸರ್ಕಾರದಿಂದ ಒಟ್ಟಾರೆಯಾಗಿ ಒದಗಿಸಲಾದ ರೂ. 28.79 ಲಕ್ಷಗಳ ಅನುದಾನದಲ್ಲಿ ನೀರು ನಿರ್ವಹಣೆಗೆ ಅವಶ್ಯವಿರುವ ಸೌಡಿಗಳ ವೇತನ ಪಾವತಿ, ವಾಹನ ನಿರ್ವಹಣೆ ಮತ್ತು ಅಗತ್ಯವಿರುವ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶ ಮಾಡಿ ಕಾರ್ಯಕ್ರಮ ಪಟ್ಟಿಯನ್ನು ಅನುಮೋದಿಸಿಕೊಂಡು ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ.

ಭದ್ರಾವತಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗೋಂದಿ ಅಣೆಕಟ್ಟು ಯೋಜನೆಯ ನಾಲೆಗಳಲ್ಲಿ ಹೂಳು ಮತ್ತು ಜಂಗಲ್ ತುಂಬಿಕೊಂಡಿದ್ದು, ನಾಲೆಗಳಲ್ಲಿ ನೀರಿನ ಹರಿವಿಗೆ ಅಡಚಣೆ ಉಂಟಾಗಿರುತ್ತದೆ.

ಕೂಡಲೇ ನಾಲೆಗಳಲ್ಲಿ ಹೂಳನ್ನು ತೆಗೆಸಲು ಅನುದಾನವನ್ನು ಒದಗಿಸಿಕೊಂಡು, ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

J.T.O. ಹುದ್ದೆಗೆ ನೇಮಕಾತಿ

50 (247) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ):– ಮಾನ್ಯ ಕಾರ್ಮಿಕ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) 2010ರಲ್ಲಿ ಸರ್ಕಾರಿ ಐ.ಟಿ.ಐ.ಗಳಿಗೆ 402 ಜೆ.ಟಿ.ಓ. ಹುದ್ದೆಗಳನ್ನು ಭರ್ತಿ ಮಾಡಿರುವುದು ಮತ್ತು ಅದರಲ್ಲಿ ಸಾಕಷ್ಟು ಅಭ್ಯರ್ಥಿಗಳು ಖೊಟಿ ಅನುಭವ ಪ್ರಮಾಣಪತ್ರಗಳನ್ನು ಸಲ್ಲಿಸಿ ಆಯ್ಕೆಗೊಂಡಿರುವುದು ಇಲಾಖೆಯ ಪರಿಶೀಲನಾಧಿಕಾರಿಗಳು ದಾಖಲೆಗಳ ನೈಜತೆಯನ್ನು ಪರಿಶೀಲಿಸದೇ ನೇಮಕಾತಿ ಆದೇಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ನೇಮಕಾತಿಗೂ ಪೂರ್ವದಲ್ಲಿ ಅನುಭವ ಪ್ರಮಾಣಪತ್ರಗಳ ನೈಜತೆಯನ್ನು ಪರಿಶೀಲಿಸುವಂತೆ ಮುನ್ನೆಚ್ಚರಿಕೆ ದೂರುಗಳು ಇಲಾಖೆಗೆ ಸಲ್ಲಿಕೆಯಾಗಿದ್ದು, ಅವುಗಳನ್ನು ಗಣನೆಗೆ ತೆಗೆದುಕೊಳ್ಳದೇ ನೇಮಕಾತಿ ಆದೇಶ ಜಾರಿ ಮಾಡಿರುವುದು ಸರ್ಕಾರದ ಗಮನಕ್ಕೆ

ಬಂದಿದೆಯೇ, ಹಾಗಿದ್ದಲ್ಲಿ ಇಲಾಖಾ ಮಟ್ಟದ ಪರಿಶೀಲನಾಧಿಕಾರಿ ಮತ್ತು ತಂಡದವರ ವಿವರಗಳನ್ನು ಅವರ ಕರ್ತವ್ಯ ಜವಾಬ್ದಾರಿಗಳ ಪಟ್ಟಿಯೊಂದಿಗೆ ಒದಗಿಸುವುದು.

ಇ) ಇಲಾಖಾಧಿಕಾರಿಗಳು ಅನುಭವ ಪ್ರಮಾಣ ಪತ್ರಗಳ ನೈಜತೆ ಪರಿಶೀಲನೆಗಾಗಿ ಪ್ರಾಚಾರ್ಯರುಗಳನ್ನು ನಿಯೋಜಿಸಿರುವ ವಿಷಯ ಮತ್ತು ಪ್ರಾಚಾರ್ಯರುಗಳು ಸಲ್ಲಿಸಿದ ವರದಿಯನುಸಾರ ಸಾಕಷ್ಟು ಅನುಭವ ಪ್ರಮಾಣ ಪತ್ರಗಳು ನಕಲಿ ಎಂದು ಬಹಿರಂಗಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಇಲಾಖಾ ಮಟ್ಟದ ಪರಿಶೀಲನಾಧಿಕಾರಿ ಮತ್ತು ತಂಡದವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು (ಪ್ರಾಚಾರ್ಯರುಗಳು ಸಲ್ಲಿಸಿರುವ ವರದಿಯ ಎಲ್ಲಾ ಪ್ರತಿಗಳನ್ನು ಒದಗಿಸುವುದು)

ಶ್ರೀ ಬಿ. ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):–

ಅ) ಬಂದಿದೆ

ಆ) ನೇಮಕಾತಿ ಪೂರ್ವದಲ್ಲಿ ಅಧಿಕೃತವಾಗಿ ಯಾರನ್ನು ಪರಿಶೀಲನಾಧಿಕಾರಿ ಎಂದು ನೇಮಕ ಮಾಡಿರುವುದಿಲ್ಲ. ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದಲ್ಲಿ ಅಭ್ಯರ್ಥಿಗಳು ಸಲ್ಲಿಸಿದ ಮೂಲ ಅನುಭವ ಪ್ರಮಾಣ ಪತ್ರಗಳನ್ನು ಅರ್ಜಿಗಳ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರಗಳ ಪ್ರತಿಗಳ ಜೊತೆ ಹೋಲಿಕೆ ಮಾಡುವ ಕೆಲಸ ಮಾತ್ರ ಮಾಡಿಸಲಾಗಿದೆ.

ಇ) ಹೌದು, ಪರಿಶೀಲನೆಗೆ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ ಮತ್ತು ಸರ್ಕಾರಿ ಐಟಿಐ ಪ್ರಾಚಾರ್ಯರನ್ನು ನೇಮಕ ಮಾಡಲಾಗಿದೆ. ಭಾಗಶಃ ಪರಿಶೀಲನಾ ವರದಿಗಳು ಬಂದಿದ್ದು, ಅದರಲ್ಲಿ ಸದ್ಯಕ್ಕೆ 10 ಜನರ ಅನುಭವ ಪ್ರಮಾಣ ಪತ್ರಗಳು ನಕಲು ಎಂದು ವರದಿಗಳು ಬಂದಿದ್ದು, ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿದೆ. ಪರಿಶೀಲನಾ ಕಾರ್ಯ ಸಂಪೂರ್ಣಗೊಂಡ ನಂತರ ತಪ್ಪಿತಸ್ತರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ನಿಯಮ ಬಾಹಿರವಾಗಿ ಮುಂಬಡ್ತಿ

51 (248) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ):– ಮಾನ್ಯ ಕಾರ್ಮಿಕ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಉದ್ಯೋಗ ಮತ್ತು ತರಬೇತಿ ಇಲಾಖೆಯ, ತರಬೇತಿ ವಿಭಾಗದ ಜಂಟಿ ನಿರ್ದೇಶಕರ 3 ಖಾಲಿ ಹುದ್ದೆಗಳಿಗೆ 1:1 ಅನುಪಾತದಲ್ಲಿ DPC ಮಾಡಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;